

## ಸಿನಿಮಾರಂಗದತ್ತ ಬೊಟ್ಟು ಮಾಡುವುದೇಕೆ?

**-ಎನ್‌.ಎಂ. ಸುರೇಶ್‌, ಕೆಎಫ್‌ಸಿಸಿ ಅಧ್ಯಕ್ಷ**

ಚಿತ್ರೋದ್ಯಮ ಭಿನ್ನವಾದ ಸ್ವಾಯತ್ತ ಸಂಸ್ಥೆ. ಸದ್ಯ ಕನ್ನಡ ಸಿನಿಮಾರಂಗ ಬಿಕ್ಕಟ್ಟಿನಲ್ಲಿದೆ. ಸಿನಿಮಾಗಳೇ ಓಡುತ್ತಿಲ್ಲ, ಇಂಥ ಪರಿಸ್ಥಿತಿಯಲ್ಲಿದ್ದೇವೆ. ಸದ್ಯ ಸಿನಿಮಾರಂಗವನ್ನು ಬೆಳೆಸುವ ಬಗ್ಗೆ ಯೋಚಿಸಬೇಕಿದೆ. ಇಂಥ ಸಂದರ್ಭದಲ್ಲಿ ಸಮಿತಿ ರಚನೆ ಮಾತುಕತೆ ನಡೆಯುತ್ತಿದೆ.

ಕೇರಳದಲ್ಲಿ ಹೇಮಾ ಸಮಿತಿ ಆಗುತ್ತಿದ್ದ ಹಾಗೆ ನಮ್ಮ ಚಿತ್ರರಂಗವನ್ನು ಬೊಟ್ಟು ಮಾಡುವುದು ತಪ್ಪು. ಮಹಿಳೆಯರ ಮೇಲಿನ ದೌರ್ಜನ್ಯ ಎಲ್ಲ ರಂಗದಲ್ಲೂ ಇದೆ. ಕಣ್ಣಿಗೆ ಕಾಣುತ್ತದೆ ಎಂದು ಚಿತ್ರರಂಗದತ್ತ ಎಲ್ಲರೂ ಬೊಟ್ಟು ಮಾಡುವುದು ಏಕೆ? ಜನರು ಸಿನಿಮಾಗಳಿಗೆ ಬರುವುದೇ ಕಡಿಮೆಯಾಗಿದೆ. ಈಗ ಈ ಬೆಳವಣಿಗೆ ಯಾವ ರೀತಿ ಇಮೇಜ್ ಕೊಡುತ್ತದೋ ಗೊತ್ತಿಲ್ಲ.

ಚಲನಚಿತ್ರ ವಾಣಿಜ್ಯ ಮಂಡಳಿ ಇರುವುದು ನಿರ್ಮಾಪಕರ, ವಿತರಕ–ಪ್ರದರ್ಶಕರ, ಕಲಾವಿದರ ಬೆಂಬಲಕ್ಕೆ ನಿಲ್ಲಲು. ಕಲಾವಿದರ ಬಗ್ಗೆ ನಮ್ಮ ಕಾಳಜಿ ಇದ್ದೇ ಇರುತ್ತದೆ. ಹೆಣ್ಣುಮಕ್ಕಳಿಗೆ ತೊಂದರೆಯಾದರೆ ನಾವು ಬೆಂಬಲ ನೀಡಲು ಇದ್ದೇ ಇದ್ದೇವೆ. ಸಂಧಾನ ಸಮಿತಿಯೂ ಇದೆ. ಶ್ರುತಿ ಹರಿಹರನ್ ಅವರ ಪ್ರಕರಣದಲ್ಲಿಯೂ ನಾವು ಬೆಂಬಲ ನೀಡಿದ್ದೆವು. ಆದರೆ ನಮಗೆ ದೂರುಗಳೇ ಬರುತ್ತಿಲ್ಲ. ಹೀಗಿದ್ದಾಗ ಬೇರೆ ಸಮಿತಿಯ ಅವಶ್ಯಕತೆಯೂ ಇಲ್ಲ.

ಸದ್ಯ ಮಹಿಳಾ ಆಯೋಗ 'ಪಾಶ್' ಸಮಿತಿ ರಚನೆಗೆ ಸಂಬಂಧಿಸಿದಂತೆ ಚಲನಚಿತ್ರ ವಾಣಿಜ್ಯ ಮಂಡಳಿಗೆ ಸೂಚನೆ ನೀಡಿದೆ. ಸಮಿತಿ ರಚನೆಗೆ ನಮ್ಮ ವಿರೋಧವಿಲ್ಲ. ನಮಗೆ ಪಾಶ್ ಸಮಿತಿ ಹೇಗೆ ಅಳವಡಿಕೆ ಆಗುತ್ತದೆ ಎಂಬುದನ್ನು ಕಾನೂನಾತ್ಮಕವಾಗಿ ನೋಡಿ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ. ಅಧ್ಯಕ್ಷನಾಗಿದ್ದ ಮೇಲೆ ಅದರ ಪೂರ್ವಾಪರ, ಸಾಧ್ಯಾಸಾಧ್ಯತೆಗಳ ಬಗ್ಗೆ ಯೋಚಿಸಬೇಕಿದೆ. ಅದರ ಬಗ್ಗೆ ಚಿಂತನೆ ಮಾಡಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ. ■

## ಸಮಿತಿ ಬರಲಿ, ಸ್ವಾತಂತ್ರ್ಯ ಇರಲಿ

**-ಜಯತೀರ್ಥ, ನಿರ್ದೇಶಕ**

ಬೇರೆ ಚಿತ್ರೋದ್ಯಮಗಳಲ್ಲಿ ವರದಿಯಾಗುತ್ತಿರುವ ಸುದ್ದಿಗಳಷ್ಟು ಘೋರ ಲೈಂಗಿಕ ದೌರ್ಜನ್ಯ ಕನ್ನಡ ಚಿತ್ರರಂಗದಲ್ಲಿಲ್ಲ ಎನ್ನುವುದು ನನ್ನ ಅನಿಸಿಕೆ. ನಾನು ನನ್ನ ಸುತ್ತ ಎಲ್ಲೂ ಆ ರೀತಿ ಕಂಡಿಲ್ಲ, ಕೇಳಿಲ್ಲ, ನನ್ನ ಅನುಭವಕ್ಕೆ ಬಂದಿಲ್ಲ. ಆದರೆ, ನನ್ನ ಅನುಭವಕ್ಕೆ ಬಂದಿಲ್ಲ ಎಂದ ಮಾತ್ರಕ್ಕೆ ಲೈಂಗಿಕ ಶೋಷಣೆ ಇಲ್ಲ ಎನ್ನಲೂ ಸಾಧ್ಯವಿಲ್ಲ.

ಲೈಂಗಿಕ ದೌರ್ಜನ್ಯ ಕುರಿತಂತೆ ಒಂದು ಸಮಿತಿ ರಚನೆ ಮಾಡುವುದರಿಂದ ಯಾರಿಗಾದರೂ ಯಾಕೆ ಹಿಂಜರಿಕೆ ಆಗಬೇಕು? ಹೇಮಾ ಸಮಿತಿ ರೀತಿಯಂತೆ ಕನ್ನಡ ಚಿತ್ರರಂಗದಲ್ಲೂ ಸಮಿತಿ ರಚನೆ ಆಗುವುದರಿಂದ ಯಾರಿಗೂ ನಷ್ಟ ಇಲ್ಲ. ಯಾರೂ ಭಯಪಡಬೇಕಾಗಿಲ್ಲ. ಸಮಿತಿ ರಚನೆ ಆದರೆ, ಆ ದೌರ್ಜನ್ಯದ ಆಲೋಚನೆ ಬರುವುದನ್ನು ತಡೆಯುವುದಕ್ಕೂ ಒಂದು ದಾರಿಯಾಗುತ್ತದೆ. ಈ ಎಲ್ಲ ದೃಷ್ಟಿಕೋನದಿಂದ ಆ ರೀತಿಯದ್ದೊಂದು ಸಮಿತಿ ಬರುವುದು ತುಂಬಾ ಒಳ್ಳೆಯದೇ.



ಸೌಲಭ್ಯಗಳ ತಾರತಮ್ಯದ ವಿಷಯಕ್ಕೆ ಬಂದರೆ ಇಲ್ಲಿ ಗಂಡು–ಹೆಣ್ಣು ಎಂಬ ವ್ಯತ್ಯಾಸಕ್ಕಿಂತ 'ಎಕಾನಮಿ' ಕಾರಣವಾಗುತ್ತದೆ ಎನ್ನುವುದು ನನ್ನ ಅನಿಸಿಕೆ. ರಮ್ಯಾ ಥರದ ದೊಡ್ಡ ಹೀರೊಯಿನ್‌ಗೆ ಸಿಗುವ ಮಾನ್ಯತೆ ಹೀರೊಗಳಿಗೆ ಸಿಗದೇ ಇರಬಹುದು. ಜನಪ್ರಿಯವಾದ ಹೀರೊಯಿನ್ ಗೆಸ್ಟ್ ಆಗಿ ಬಂದರೆ ಹೀರೊಗಿಂತ ಹೆಚ್ಚಿನ ಸಂಭಾವನೆ ಸಿಕ್ಕಿರುತ್ತದೆ. ಯಾರು ಹೆಚ್ಚು ಎಕಾನಮಿ ತಂದುಕೊಡುತ್ತಾರೆ ಎಂಬುದು ಇಲ್ಲಿ ಮುಖ್ಯವಾಗುತ್ತದೆ. ಸಿನಿಮಾರಂಗ ಕೂಡ ಉದ್ಯಮವಾಗಿರುವುದರಿಂದ ಕಲೋದ್ಯಮ–ಚಿತ್ರೋದ್ಯಮ ಆಗಿರುವುದರಿಂದ, ಯಾರಿಗೆ ಹೆಚ್ಚು ರೀಚ್ ಇದೆ, ಜನಪ್ರಿಯತೆ ಇದೆ ಅನ್ನುವವರಿಗೆ ಮಾನ್ಯತೆ. ಇದರಲ್ಲಿ ತಾರತಮ್ಯ ಎನ್ನುವ ಮಾತು ಸಲ್ಲದು.

ಜೊತೆಗೆ, ಸಮಾಜದಲ್ಲಿ ಇರುವುದೇ ಇಲ್ಲೂ ಇರುವುದು. ಆರೋಪಗಳನ್ನು ಗಮನಿಸಬೇಕಿದೆ. ಮಾತನಾಡುತ್ತಿರುವ ಧ್ವನಿಯನ್ನು ಪ್ರೋತ್ಸಾಹಿಸಬೇಕಿದೆ. ಸ್ವಾತಂತ್ರ್ಯವನ್ನು ಕಾಪಾಡಬೇಕಿರುವುದು ಪ್ರತಿಯೊಬ್ಬರ ಜವಾಬ್ದಾರಿ. ■



ಪ್ರತಿಕ್ರಿಯಿಸಿ:
feedback@sudha.co.in